**ಡಿ ಡಬ್ಲ್ಯೂಃ 1**

**ದಿನಾಂಕಃ 27-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ವಿ.ಎಸ್.ಎಸ್. ಅವರಿಂದಃ**

1. ನಾನು ಒಕ್ಕಲುತನ ಮಾಡುವುದಿಲ್ಲ. ನನ್ನ ಸ್ವಂತ ಊರು ಮಾಲಗಿತ್ತಿ. ನಾನು ಮಾಲಗಿತ್ತಿ ಬಿಟ್ಟು 26 ವರ್ಷ ಆಗಿದೆ, ಆದರೆ ಆಗಾಗ ಹೋಗಿ ಬಂದು ಮಾಡುತ್ತೇನೆ. ಮಾಲಗಿತ್ತಿ ಯಲ್ಲಿ ನಮ್ಮ ತಂದೆಯಿಂದ ಬಂದ ಜಮೀನುಗಳು ಇವೆ. ವಾದಿಗಳ ಜಮೀನುಗಳ ಹತ್ತಿರ ನಮ್ಮ ಜಮೀನು ಇದೆ. ಸದರಿ ಜಮೀನಿನ ಸರ್ವೇ ನಂ. 11, ಅದು 3 ಎಕರೆ 21 ಗುಂಟೆ ಇದೆ. ಅದು ನನ್ನ ಹೆಂಡತಿ ಬಸಮ್ಮನ ಹೆಸರಿನಲ್ಲಿ ಇದೆ. ದಾವಾ ಜಮೀನಿನ ಪಶ್ಚಿಮಕ್ಕೆ ಸದರಿ ನಮ್ಮ ಜಮೀನು ಇದೆ. ಸರ್ವೇ ನಂ.9 ರ ಪಹಣಿಯನ್ನು ನಾನು ನೋಡಿರುತ್ತೇನೆ, ಅದರಲ್ಲಿ 11 ಹಿಸ್ಸಾಗಳು ಇವೆ.

2. ಈ ಕೇಸ್ ದಾಖಲಿಸಿದ ನಂತರ ನಾನು 1 ನೇ ಪ್ರತಿವಾದಿಯ ಜಮೀನು ಖರೀದಿ ಮಾಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮೊದಲು ಮಾತುಕತೆಯಾಗಿತ್ತು ಎಂದು ನುಡಿಯತ್ತಾರೆ. ನಾನು ಖರೀದಿ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. 2018 ರಲ್ಲಿ ನಾನು 1 ನೇ ಪ್ರತಿವಾದಿಯ ಜಮೀನು ಖರೀದಿ ಮಾಡಿರುತ್ತೇನೆ. 2016 ನೇ ಸಾಲಿನಲ್ಲಿ ವಾದಿಗಳಿಗೂ ಮತ್ತು 1 ನೇ ಪ್ರತಿವಾದಿಗೂ ಜಮೀನು ಸಂಬಂಧ ತಂಟೆ ಇದ್ದ ಬಗ್ಗೆ ನನಗೆ ಮಾಹಿತಿ ಇತ್ತು.

3. ಸರ್ವೇ ನಂ.9 ಒಟ್ಟು 30 ಎಕರೆ ಮೇಲೆ ಇದೆ. ಸರ್ವೇ ನಂ.9 ರ ಒಂದನೇ ಹಿಸ್ಸಾ ಶಂಕ್ರಪ್ಪ ಕೊಟ್ಟಗಿ ಇವರ ಹೆಸರಿನಲ್ಲಿ ಇದೆ. ವಾದಿಗಳು ಕೇಸ್ ಹಾಕಿದ ಜಮೀನಿನ ಬಗ್ಗೆ ನನಗೆ ಮಾಹಿತಿ ಇದೆ. ವಾದಿಗಳು ಎರಡು ಜಮೀನುಗಳ ಕುರಿತು ಕೇಸ್ ಹಾಕಿರುತ್ತಾರೆ. ಅವುಗಳ ಸರ್ವೇ ನಂ. 9 /7, 4 ಎಕರೆ 4 ಗುಂಟೆ ಮತ್ತು 9 ಹಿಸ್ಸಾ 3, 3 ಎಕರೆ 28 ಗುಂಟೆ ಇದೆ. 3 ಎಕರೆ 28 ಗುಂಟೆ ಆಸ್ತಿ ವಾದಿಗೆ ಖರೀದಿ ಹಿಡಿದ ಆಸ್ತಿ ಎಂದರೆ ಸರಿ. ಸದರಿ 3

ಎಕರೆ 28 ಗುಂಟೆ ಆಸ್ತಿಗೆ ಮೊದಲು ಅಡಿವೆವ್ವ ಗಂಡ ಅಡಿವೆಪ್ಪ ಮುದೇನೂರು ಅವರು ಮಾಲೀಕರು ಮತ್ತು ಕಬ್ಜೆದಾರರು ಇದ್ದರು ಎಂದರೆ ಸರಿ. 1973-74 ರ ಸಾಲಿನಲ್ಲಿ 2 ನೇ ವಾದಿ ಸದರಿ ಜಮೀನನ್ನು ಖರೀದಿ ಮಾಡಿರುತ್ತಾನೆ ಎಂದರೆ ಸರಿ. 1 ನೇ ವಾದಿ, 2 ನೇ ವಾದಿಯ ತಮ್ಮ ಎಂದರೆ ಸರಿ. ಖರೀದಿ ಆದಾಗಿನಿಂದ ಸದರಿ ಜಮೀನು ವಾದಿಗಳ ಕಬ್ಜೆವಹಿವಾಟಿನಲ್ಲಿ ಇದೆ ಎಂದರೆ ಸರಿ. ವಾದಿಗಳ 3 ಎಕರೆ 28 ಗುಂಟೆ ಜಮೀನಿನ ಪಶ್ಚಿಮಕ್ಕೆ ಕಳಕವ್ವ ಗಂಡ ಮಹಾಕೂಟಪ್ಪ ಮುದೇನೂರು, ಪೂರ್ವಕ್ಕೆ ಶರಣಪ್ಪ ನಿಂಗಪ್ಪ ಅಂಗಡಿ ಅವರ ಜಮೀನು ಇದೆ ಎಂದರೆ ಸಾಕ್ಷಿಯು ಅವರ ಜಮೀನನ್ನು ನಾನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿಯವರ ಜಮೀನನ್ನು 2007-08 ರ ಸಾಲಿನಲ್ಲಿ ನಾನು ಖರೀದಿ ಮಾಡಿರುತ್ತೇನೆ. ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ; ಉತ್ತರಕ್ಕೆ ವಾದಿಗಳ ಇನ್ನೊಂದು ಜಮೀನು ಬರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅಡಿವೆಪ್ಪ ಶಿವಪ್ಪ ಮುದೇನೂರು ಅವರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ; ಅದು 3 ಎಕರೆ 22 ಗುಂಟೆ ಸರ್ವೆ ನಂ. 9 ಹಿಸ್ಸಾ 2 ಎಂದು ನುಡಿಯುತ್ತಾರೆ. ಆ ಕುರಿತು ನಾನು ದಾಖಲೆ ಹಾಜರುಪಡಿಸಿರುತ್ತೇನೆ; ಸದರಿ 3 ಎಕರೆ 28 ಗುಂಟೆ ಜಮೀನಿನ ದಕ್ಷಿಣಕ್ಕೆ 1 ನೇ ಪ್ರತಿವಾದಿಯ ಜಮೀನನ್ನು ನಾನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. 1973-74 ರಿಂದ ಸದರಿ 3 ಎಕರೆ 28 ಗುಂಟೆ ಜಮೀನಿಗೆ ವಾದಿಗಳು ಮಾಲೀಕರು ಮತ್ತು ಕಬ್ಜೆದಾರರು ಇದ್ದಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಮಧ್ಯದಲ್ಲಿ ಒಬ್ಬರಿಗೆ 1 ಎಕರೆ 34 ಗುಂಟೆ ಜಮೀನನ್ನು 2003-04 ರಲ್ಲಿ ಮಾರಾಟ ಮಾಡಿ ಪುನಃ 2004-05 ರ ಸಾಲಿನಲ್ಲಿ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಖರೀದಿ ಮಾಡಿದಾಗಿನಿಂದಲೂ ಸಹ ಅವರೇ ಪುನಃ ಮಾಲೀಕರು ಮತ್ತು ಕಬ್ಜೆದಾರರು ಇದ್ದಾರೆ ಎಂದರೆ ಸರಿ. ಸದರಿ ಜಮೀನಿಗೆ ದಕ್ಷಿಣಕ್ಕೆ ಒಡ್ಡು ಇದೆ ಎಂದರೆ ಸರಿಯಲ್ಲ.

4. 1 ನೇ ವಾದಿ, 1 ನೇ ಪ್ರತಿವಾದಿಗೆ ನಿಮ್ಮ ಭೂಮಿ ಕೇವಲ 2 ಎಕರೆ ಇದೆ ಎಂದು ವಾದ ಮಾಡುತ್ತಿದ್ದರು. ಅದು ಮಾರ್ಚ್- ಎಪ್ರಿಲ್ 2016 ಇರಬಹುದು. 2018 ರಲ್ಲಿ 1 ನೇ ಪ್ರತಿವಾದಿ ಹೊಲ ಅಳತೆ ಮಾಡಿಸಿಲ್ಲ, ಆದರೆ ನಾನು ಮಾಡಿಸಿರುತ್ತೇನೆ. ಖರೀದಿ ಆದ ನಂತರ ಮಾಡಿಸಿರುತ್ತೇನೆ. ಖರೀದಿ ಆದ ನಂತರ 1 ವರ್ಷದ ಒಳಗಡೆ ಅಳತೆ ಮಾಡಿಸಿರುತ್ತೇನೆ. ಖರೀದಿ ಆಗುವಾಗ ನಕ್ಷೆ ಈಗ ಕಡ್ಡಾಯ ಇದೆ ಎಂದರೆ ಸರಿ. ನಾನು ಖರೀದಿ ಮಾಡುವ ಪೂರ್ವದಲ್ಲಿ ಸಹ ಮ್ಯಾಪ್ ಕಡ್ಡಾಯ ಇತ್ತು ಎಂದರೆ ಸರಿ. ನಾನು ಹೊಲ ಖರೀದಿ ಮಾಡುವ ಪೂರ್ವದಲ್ಲಿ ಮ್ಯಾಪ್ ಮಾಡಿಸಿ, ಅಳತೆ ಮಾಡಿಸಿ ನಂತರ ಖರೀದಿ ಮಾಡಿರುತ್ತೇನೆ. ಯಾವ ವರ್ಷ ಅಳತೆ ಮಾಡಿಸಿರುತ್ತೇನೆ ಎಂದು ನನಗೆ ದಿನಾಂಕ ಕನ್ಫ್ಯೂಸ್ ಇದೆ. ಅಳತೆ ಮಾಡಿಸಲು ಅರ್ಜಿಯನ್ನು ಅಯ್ಯಪ್ಪನ ಹೆಸರಿನಲ್ಲಿ ಕೊಟ್ಟಿರುತ್ತೇವೆ. ಖರೀದಿ ಆಗುವ ಪೂರ್ವದಲ್ಲಿ ಹೊಲದ ಮಾಲೀಕರು ಮತ್ತು ಖರೀದಿ ಆದ ನಂತರ ಖರೀದಿದಾರರು ಅರ್ಜಿ ಕೊಡಬೇಕು. ಆ ಸಮಯದಲ್ಲಿ ನನ್ನ 3 ಎಕರೆ 30 ಗುಂಟೆ ಹಾಗೂ 1 ನೇ ಪ್ರತಿವಾದಿಯ 3 ಎಕರೆ 28 ಗುಂಟೆ ಅಳತೆ ಮಾಡಿರುತ್ತಾರೆ. ಆ ರೀತಿ ಅಳತೆ ಮಾಡಿದಾಗ ಅವರ ಮತ್ತು ನಮ್ಮ ಜಮೀನು ಎರಡೂ ಇವೆ ಎಂದು ವರದಿ ಬಂದಿರುತ್ತದೆ. ಸದರಿ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಖರೀದಿ ಮಾಡಿದ ನಂತರ ನಾನು ಹದ್ದುಬಸ್ತು ಮಾಡಿಸಿರುತ್ತೇನೆ. 30.01.2020 ರಲ್ಲಿ ಹದ್ದುಬಸ್ತು ಮಾಡಿಸಿರುತ್ತೇವೆ. ಹದ್ದುಬಸ್ತು ಆಗಿ ಕಲ್ಲು ಹಾಕಿದ್ದರು, ಆ ಕಲ್ಲುಗಳನ್ನು ವಾದಿಗಳು 2021 ರಲ್ಲಿ ಕಿತ್ತಿರುತ್ತಾರೆ. ನಾವು ಹದ್ದುಬಸ್ತು ಮಾಡಿದಾಗ 3 ಎಕರೆ 30 ಗುಂಟೆ ಆಸ್ತಿ 1 ನೇ ಪ್ರತಿವಾದಿ ಅಯ್ಯಪ್ಪನದ್ದು ಇದೆ ಎಂದು ಕೊಟ್ಟಿರುತ್ತಾರೆ ಹಾಗೂ 1 ಎಕರೆಗಿಂತ ಹೆಚ್ಚಿಗೆ ದಕ್ಷಿಣ ದಿಕ್ಕಿಗೆ ಒತ್ತುವರಿ ಆಗಿದೆ ಎಂದು ಸಹ ಕೊಟ್ಟಿರುತ್ತಾರೆ. ನಾನು ಖರೀದಿ ಮಾಡುವ ಪೂರ್ವದಲ್ಲಿಯೇ ಒತ್ತುವರಿ ಆಗಿದೆ. ಒತ್ತುವರಿ ಆದುದ್ದನ್ನು ಬಿಡಿಸಿಕೊಡಿ ಎಂದು 1 ನೇ ಪ್ರತಿವಾದಿಗೆ ಕೇಳಿದ್ದಿರಾ ಎಂದರೆ ಸಾಕ್ಷಿಯು ಕೋರ್ಟ ಮುಖಾಂತರ ಬಿಡಿಸಿಕೊಳ್ಳೋಣ, ಸುಮ್ಮನೆ ಜಗಳಾಡುವುದು ಬೇಡ ಎಂದು ಹೇಳಿದ್ದರಿಂದ ತೆಗೆದುಕೊಂಡಿರುತ್ತೇನೆ. ಒತ್ತುವರಿ ವರದಿಯನ್ನು ಸಬ್ ರಜಿಸ್ಟರ್

ಅವರಿಗೆ ತೋರಿಸಿರುತ್ತೇವೆ. 1 ಎಕರೆ 20 ಗುಂಟೆ ಒತ್ತುವರಿ ಆಗಿತ್ತಾ ಎಂದರೆ ಹೌದು. ಒತ್ತುವರಿ ಆದರೂ ಸಹ ಖರೀದಿ ಮಾಡಲು ಸಬ್‌ರಜಿಸ್ಟರ್ ಒಪ್ಪಿರುತ್ತಾರಾ ಎಂದರೆ ಸಾಕ್ಷಿಯು ಒತ್ತುವರಿ ಆದ ಕುರಿತು ವರದಿಯನ್ನು ಅವರಿಗೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಯಾವ ವರ್ಷ ಒತ್ತುವರಿ ಮಾಡಿರುತ್ತಾರೆ ಎಂದು ತಿಳಿದುಕೊಂಡಿಲ್ಲ. 1 ಎಕರೆ 20 ಗುಂಟೆ ಜಮೀನನ್ನು ವಾದಿಗಳು ಒತ್ತುವರಿ ಮಾಡಿಕೊಂಡಿರುತ್ತಾರೆ ಅದನ್ನು ಬಿಡಿಸಿಕೊಡಿ ಎಂದು ನಾನು ಪ್ರತ್ಯೇಕ ದಾವೆ ಮಾಡಿಲ್ಲ. ಈ ಕೇಸನಲ್ಲಿ ತಕರಾರು ಸಲ್ಲಿಸುವಾಗ 1 ಎಕರೆ 20 ಗುಂಟೆ ಜಮೀನನ್ನು ಬಿಡಿಸಿಕೊಡಿ ಎಂದು ವಕೀಲರಿಗೆ ಮಾಹಿತಿ ಕೊಟ್ಟಿದ್ದಿರಾ ಎಂದರೆ ಇಲ್ಲ. ಸಾಕ್ಷಿಯು ಮುಂದುವರೆದು ನಮ್ಮ ದಾಖಲಾತಿಗಳು ಸರಿ ಇದ್ದುದರಿಂದ ಸುಮ್ಮನೆ ಇದ್ದೇವೆ ಎಂದು ನುಡಿಯುತ್ತಾರೆ.

5. ಈ ವರ್ಷ ವಾದಿಗಳು ಸೂರ್ಯಕಾಂತಿ ಮತ್ತು ತೊಗರಿ ಬೆಳೆ ಬಿತ್ತಿದ್ದಾರೆ. 3 ಎಕರೆ 28 ಗುಂಟೆ ಅಲ್ಲದೇ ನಮ್ಮದು 1 ಎಕರೆ 20 ಗುಂಟೆ ಜಮೀನನ್ನು ರಾತ್ರೋರಾತ್ರಿ ಹರಗಿ ಬಿತ್ತಿರುತ್ತಾರೆ ಎಂದು ನುಡಿಯುತ್ತಾರೆ.

**( ಮುಂದುವರೆದ ಪಾಟೀಸವಾಲಿಗೆ ಮಧ್ಯಾಹ್ನದ ಕಲಾಪದಲ್ಲಿ ಪಾಟೀಸವಾಲು ಮಾಡಲು ಸಮಯಾವಕಾಶ ಕೋರಿದ್ದು ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ

**ದಿನಾಂಕಃ 27-07-2026 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ವಿ.ಎಸ್.ಎಸ್. ಅವರಿಂದಃ**

7. ಸರ್ವೇ ನಂ.9 ಹಿಸ್ಸಾ 1 ಮೊದಲು ಇದ್ದು ಈಗ ಸರ್ವೇ ನಂ. 9 ಹಿಸ್ಸಾ 7 ಆಗಿದೆ. ಅದು 4 ಎಕರೆ 4 ಗುಂಟೆ ಇದೆ. ಸದರಿ ಜಮೀನ ಪೂರ್ವಕ್ಕೆ ಮೊದಲು ಶರಣಪ್ಪ ಲಿಂಗಪ್ಪ ಇದ್ದ, ಈಗ ದ್ಯಾಮಣ್ಣ ಗಾಜಿ, ಪಶ್ಚಿಮಕ್ಕೆ ಬಂಡಿ ರಸ್ತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯ ಮುಂದುವರೆದು ಪ್ರಕಾಶಪ್ಪ ಕೊಟಗಿ ರವರ ಜಮೀನು ಇದೆ ಎಂದು ನುಡಿಯುತ್ತಾರೆ. ಉತ್ತರಕ್ಕೆ ಮಹಕೂಟಪ್ಪ ತಂದೆ ಅಡಿವೆಪ್ಪ ಇವರ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕಾಶಪ್ಪ ಅವರ ಹೆಸರಿನಲ್ಲಿ ಮೊದಲು ಇತ್ತು, ಈಗ ಈಶವ್ವ ರವರ ಹೆಸರಿನಲ್ಲಿ ಜಮೀನು ಇದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ಮೊದಲು ಮಹಾಕೂಟಪ್ಪನ ಜಮೀನು ಇತ್ತು, ಆತ ಪೋತಿಯಾದನಂತರ ಅಡಿವೆಪ್ಪ ಶಿವಪ್ಪ ಮುದೇನೂರ ಇವರ ಜಮೀನು ಇದೆ. ದಾವಾ ಐಟಂ. ನಂ.2 ಸರ್ವೇ ನಂ.9 ಹಿಸ್ಸಾ 1, 4 ಎಕರೆ 12 ಗುಂಟೆ ಇದೆ ಎಂದರೆ ಸರಿಯಲ್ಲ. ಅದು ಪೆಕ್ ಇದ್ದು ಆ ರೀತಿ ಜಮೀನು ಇಲ್ಲವೆಂದು ನುಡಿಯುತ್ತಾರೆ. ಪೂರ್ವಕ್ಕೆ ದ್ಯಾಮಣ್ಣ ಗಾಜಿ, ಪಶ್ಚಿಮಕ್ಕೆ ಶ್ರಂಕಪ್ಪ ಕೊಟಗಿ, ಉತ್ತರಕ್ಕೆ ಪ್ರಕಾಶಪ್ಪ ಕೊಟಗಿ, ದಕ್ಷಿಣಕ್ಕೆ ಮಹಾಕೂಟಪ್ಪ ಮುದೇನಗುಡಿ ಅವರ ಜಮೀನು, ಈ ಚೆಕ್ಕಬಂದಿ ನಡುವೆ ದಾವಾ ಐಟಂ.ನಂ.2 ರ ಜಮೀನು ಇದೆ ಎಂದರೆ ಅದು ಸಂಪೂರ್ಣ ಸುಳ್ಳು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಜಮೀನನ್ನು ಅಳತೆ ಮಾಡುವ ಕಾಲಕ್ಕೆ ಸದರಿ ಜಮೀನನನ್ನು ಅಳತೆ ಮಾಡಿದ್ದರು ಎಂದರೆ ಸಾಕ್ಷಿಯು ಸದರಿ ಪಹಣಿಯನ್ನು ಇಟ್ಟುಕೊಂಟು ನನ್ನನ್ನು

ನನ್ನ ಜಮೀನಿನಿಂದ ಹೊರ ಹಾಕಲು ಅವರು ಪ್ರಯತ್ನಿಸುತ್ತಿದ್ದಾರೆಂದು ನುಡಿಯುತ್ತಾರೆ. ಸದರಿ ಜಮೀನು ಪಹಣಿ ಪೆಕ್ ಇದೆ ಎಂದು ನಾನು ನಮ್ಮ ವಕೀಲರಿಗೆ ಹೇಳಿರುತ್ತೇನೆ.

8. ಸರ್ವೆ ನಂ.9 ಹಿಸ್ಸಾ ಅ ಪಿ1 ಜಮೀನು ಬಗ್ಗೆ ನನಗೆ ಮಾಹಿತಿ ಇಲ್ಲ. ಸರ್ವೆ ನಂ. 9 ಹಿಸ್ಸಾ 3 ಇ ಯಾರ ಹೆಸರಿನಲ್ಲಿ ಇದೆ, ಎಷ್ಟು ಎಕರೆ ಇದೆ, ಯಾರು ಸಾಗುವಳಿ ಮಾಡುತ್ತಿದ್ದಾರೆಂದು ಹೇಳಲು ಬರುವುದಿಲ್ಲ. ಸದರಿ ಜಮೀನುಗಳು ಯಾರ ಹೆಸರಿನಲ್ಲಿ ಇವೆ, ಯಾರಿಗೆ ಹೇಗೆ ಬಂದಿರುತ್ತವೆ ಎಂದು ನಮ್ಮ ವಕೀಲರಿಗೆ ಹೇಳಿರುತ್ತೇನೆ. ಸರ್ವೆ ನಂ.9 ಹಿಸ್ಸಾ 3 ಇ ಜಮೀನಿನ ಚೆಕ್ಕಬಂದಿ ಏನೆಂದರೆ ಸಾಕ್ಷಿಯು ಮಾಲೀಕರ ಹೆಸರನ್ನುಹೇಳಿದರೆ ನಾನು ಹೇಳುತ್ತೇನೆಂದು ನುಡಿಯುತ್ತಾರೆ. ಸದರಿ ಜಮೀನುಗಳ ಪಹಣಿಯುನ್ನು ನಾನು ನೋಡಿರುವುದಿಲ್ಲ, ಆದರೆ ಈಗ ನೆನಪು ಬರುತ್ತಿಲ್ಲ. ಸರ್ವೆ ನಂ.9 ಹಿಸ್ಸಾ ಅಪಿ2 ಜಮೀನಿನ ಮಾಲೀಕರು ಯಾರು, ಯಾರ ಹೆಸರಿನಲ್ಲಿ ಇದೆ ಹಾಗೂ ಅದರ ಚೆಕ್ಕಬಂದಿ ಹೇಳಲು ಬರುವುದಿಲ್ಲ. ಸದರಿ ಜಮೀನುಗಳು ದಾವಾ ಜಮೀನುಗಳ ಯಾವ ದಿಕ್ಕಿಗೆ ಬರುತ್ತವೆ ಎಂದರೆ ಸಾಕ್ಷಿಯು ಕನ್ ಫ್ಯೂಜ್ ಆಗುತ್ತಿದೆ ಎಂದು, ಕಾಗದ ನೋಡಿದರೆ ಹೇಳುತ್ತೆನೆ ಎಂದು ನುಡಿಯುತ್ತಾರೆ. ಸದರಿ ಮೂರು ಜಮೀನುಗಳನ್ನು ಅಳತೆ ಮಾಡಿಸಲು ಅರ್ಜಿಯನ್ನು ಕೊಟ್ಟಿದ್ದೀರ ಎಂದರೆ ಸಾಕ್ಷಿಯು ಅವರಿಗೂ ಮತ್ತು ನಮಗೆ ಸಂಬಂಧ ಇಲ್ಲವೆಂದು ನುಡಿಯುತ್ತಾರೆ. ಸದರಿ ಮೂರು ಜಮೀನುಗಳು 1 ಮತ್ತು 2 ನೇ ಪ್ರತಿವಾದಿಗಳಿಗೆ ಸಂಬಂಧ ಇಲ್ಲ. ಸದರಿ ಮೂರು ಜಮೀನುಗಳನ್ನು ಯಾರು ಸಾಗುವಳಿ ಮಾಡುತ್ತಿದ್ದಾರೆಂದರೆ ಸಾಕ್ಷಿಯು ಈಗ ಪ್ರಸ್ತುತ ಹಿಸ್ಸಾ ಗಳು ಚೆಂಜ್ ಆಗಿದ್ದು ಕನ್ ಫ್ಯೂಜ್ ಆಗುತ್ತಿದೆ ಎಂದು ನುಡಿಯುತ್ತಾರೆ. ಹಿಸ್ಸಾಗಳು ಯಾವ ವರ್ಷ ಬದಲಾಗಿದೆ ಎಂದು ಹೇಳಲು ಬರುವುದಿಲ್ಲ.

9. ಮೊದಲು ನಮಗೂ ಮತ್ತು ವಾದಿಗಳಿಗೂ ಜಗಳ ಇರಲಿಲ್ಲ, ಈಗ ಅವರು ನನ್ನನ್ನು ಹೊರ ಹಾಕಲು ಜಗಳ ಮಾಡುತ್ತಿದ್ದಾರೆ. 2020 ರ ನಂತರ ಅವರು ನನ್ನನ್ನು ಹೊರ ಹಾಕಲು ಪ್ರಯತ್ನಿಸಿರುತ್ತಾರೆ. ಭೂಮಿ ಎಲ್ಲಾ ನಮಗೆ ಬರುತ್ತದೆ ಎಂದು ಅವರು ಜಗಳ ಮಾಡುತ್ತಿದ್ದಾರೆ. 1 ನೇ ಪ್ರತಿವಾದಿ ಮತ್ತು ವಾದಿಗಳ ನಡುವೆ ಜಗಳ ಯಾವ ಕಾರಣಕ್ಕೆ ಆಗಿದೆ ಎಂದರೆ ಜಮೀನು ಸಂಬಂಧ ಇರಬಹುದು, ಆ ಬಗ್ಗೆ ನನಗೆ ಗೊತ್ತಿಲ್ಲ. ನಾನು ಖರೀದಿ ಹಿಡಿದಾಗಿನಿಂದಲೂ ಸಹ ನಾನು 3 ಎಕರೆ 30 ಗುಂಟೆ ಮಾಡುತ್ತಿದ್ದೆ, ಮೊನ್ನೆ ರಾತ್ರೆರಾತ್ರಿ ಬಂದು ನಮ್ಮ ಜಮೀನು ಗಳೇ ಹೊಡೆದು 1 ನೇ ವಾದಿ ಮತ್ತು ಆತನ ಇಬ್ಬರು ಹೆಂಡತಿಯರು ನನಗೆ ಬಂದರೆ ಕೊಲೆ ಮಾಡುತ್ತೇವೆಂದು ಬೆದರಿಕೆ ಹಾಕಿದ್ದರಿಂದ ನಾನು ಅಲ್ಲಿ ಹೋಗಿಲ್ಲ , ಈಗ ನನಗೆ ಹೊಲಕ್ಕೆ ಎಂಟರ್ ಆಗಲು ಬಿಡುತ್ತಿಲ್ಲವೆಂದು ನುಡಿಯುತ್ತಾರೆ. ಅದು ಯಾವಾಗ ಆಗಿದೆ ಎಂದರೇ ಸಾಕ್ಷಿಯು ಮೇ ತಿಂಗಳು 2026 ಎಂದು ನುಡಿಯುತ್ತಾರೆ. ನಾನು ಆ ಬಗ್ಗೆ ಕಂಪ್ಲೆಂಟ್ ಅನ್ನು ಹನುಮಸಾಗರ ಠಾಣೆಗೆ ಕೊಟ್ಟಿರುತ್ತೇನೆ.

10. 3 ಎಕರೆ 28 ಗುಂಟೆ ಜಮೀನು ಹಾಗೂ 1 ನೇ ಪ್ರತಿವಾದಿಯ ಜಮೀನಿನ ನಡುವೆ ಬದುವು ಇದೆ ಎಂದರೆ ಸಾಕ್ಷಿಯು 2 ನೇ ಬದುವು ಇಲ್ಲ 1 ನೇ ಬದುವು ಇದೆ ಎಂದು ನುಡಿಯುತ್ತಾರೆ. ನಕಾಶೆ ಪ್ರಕಾರ ಅಲ್ಲಿ 2 ಬದುವು ಇದ್ದವು. ಖರೀದಿ ಪತ್ರದಲ್ಲಿ ಆ ರೀತಿ ಬರೆದಿಲ್ಲ. 1 ನೇ ಪ್ರತಿವಾದಿ ಅಯ್ಯಪ್ಪನ ಹಾಗೂ ವಾದಿಗಳ ಜಮೀನಿನ ಮಧ್ಯ ಬರುವ ಬದುವಿನ ಉತ್ತರ ದಿಕ್ಕಿಗೆ 3 ಎಕರೆ 28 ಗುಂಟೆ ಜಮೀನು ಇದೆ ಎಂದರೆ ಸರಿ. ಆ ಬದುವು ಎಷ್ಟು ವರ್ಷಗಳಿಂದ ಇದೆ ಎಂದರೆ ಸಾಕ್ಷಿಯು 40 ವರ್ಷದಿಂದ ಇತ್ತು, ಆದರೆ ಈಗ ತೆಗೆದಿರುತ್ತಾರೆಂದು ನುಡಿಯುತ್ತಾರೆ. ಬದುವು ಅನ್ನು ಯಾವಾಗ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಆ ಬದುವಿನ ದಕ್ಷಿಣಕ್ಕೆ ಬರುವ ಜಮೀನು 1

ನೇ ಪ್ರತಿವಾದಿಗೆ ಸಂಬಂಧಿಸಿದ್ದು ಎಂದರೆ ಸರಿ. ಬದುವಿಗೆ ಗಿಡಗಳು ಇವೆ. ಸುಮಾರು 20-30 ವರ್ಷಗಳಿಂದ ಗಿಡಗಳು ಇವೆ. ಸಾಕ್ಷಿಯು ಮುಂದುವರೆದು ನಮ್ಮ ಮತ್ತು ಅವರ ನಡುವಿನ ಜಮೀನಿನ ಬದುವನ್ನು ಅವರು ತೆಗೆದಿದ್ದು, ಅಲ್ಲಿ ಗಿಡವಿಲ್ಲವೆಂದು ನುಡಿಯುತ್ತಾರೆ. ನಾನು ಕೊಟ್ಟ ನಿಡಿ-25 ರಲ್ಲಿ ನಾನು ಬದುವಿನಲ್ಲಿ ಗಿಡವಿದೆಎಂದು ಹೇಳಿರುತ್ತೇನೆಂದರೆ ಸಾಕ್ಷಿಯು ಆ ಬದುವು ಸರ್ವೇ ನಂ. 11 ಮತ್ತು 9 ರ ನಡುವೆ ಇರುವ ಬದುವು ಎಂದು ನುಡಿಯುತ್ತಾರೆ. ಸದರಿ ಬದುವಿನ ತಂಟೆ ಇದೆ ಎಂದು ನಾನು ಹೇಳಿರುತ್ತೇನೆಂದರೆ ಸಾಕ್ಷಿಯು ಗಿಡ ಕಡಿದಾಗ ಜಗಳ ಸ್ಟಾರ್ಟ್ ಆಗಿದೆ ಎಂದು ನುಡಿಯುಯುತ್ತಾರೆ. 2018 ನೇ ಸಾಲಿನಲ್ಲಿ ಅವರು ಗಿಡ ಕಡೆದಿರಬಹುದು. ಅಳತೆ ಮಾಡಿ ಗಿಡ ಕಡಿದುಕೊಳ್ಳಿ ಎಂದ ನಾವು ಹೇಳಿದ್ದು ಅವರು ಅಳತೆ ಮಾಡದೇ ಗಿಡ ಕಡಿದಿದ್ದರಿಂದ ಜಗಳ ಆಗಿದೆ. ಆಗ ನನ್ನ ಹೆಸರಿನಲ್ಲಿ ಇನ್ನು ಅಯ್ಯಪ್ಪನ ಜಮೀನು ನನ್ನ ಹೆಸರಿನಲ್ಲಿ ಖರೀದಿಯಾಗಿರಲಿಲ್ಲ.

11. ನಾನು ಖರೀದಿ ಮಾಡಿದ ಪ್ರಕಾರ ಪಹಣಿ ಇಲ್ಲ, ನಾನಾಗಲಿ, 1 ನೇ ಪ್ರತಿವಾದಿಯಾಗಲೀ ಪಹಣಿಯಲ್ಲಿರುವಂತೆ ಜಮೀನಿನ ಸ್ವಾಧೀನದಲ್ಲಿ ಇಲ್ಲವೆಂದರೆ ಸರಿಯಲ್ಲ. ವಾದಿಗಳ ದಾವಾ ಐಟಂ.ನಂ.3 ರ ಜಮೀನಿನ ದಕ್ಷಿಣಕ್ಕೆ 2 ಜಮೀನಿಗೆ ಮಾತ್ರ 1 ನೇ ಪ್ರತಿವಾದಿ ಮಾಲೀಕ ಇದ್ದ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎರಡೂವರೆ ಎಕರೆ ಮೇಲೆ ಮೂರು ಎಕರೆ ಹತ್ತಿರ ಆತನು ಸ್ವಾಧೀನ ಇದ್ದರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಎರಡು ಎಕರೆ ಜಮೀನಿನಲ್ಲಿ ಮಾತ್ರ ಸ್ವಾಧೆನ ಇದ್ದ ಎಂದು ನನಗೆ ಗೊತ್ತಿದ್ದರು ಸಹ ವಾದಿಗಳ ಜಮೀನನ್ನು ಎತ್ತಿ ಹಾಕಲು ನಾನು 3 ಎಕರೆ 30 ಗುಂಟೆ ಎಂದು ಸುಳ್ಳು ಖರೀದಿ ಪತ್ರವನ್ನು ಸೃಷ್ಟಿಸಿರುತ್ತೇನೆಂದರೆ

ಸರಿಯಲ್ಲ. ಅವರ ನ್ಯಾಯಾಕ್ಕೂ ನಮಗೂ ಸಂಬಂಧ ಇಲ್ಲವೆಂದು ನುಡಿಯುತ್ತಾರೆ. ನಾನು ಸಹ 2 ಎಕರೆ ಜಮೀನಿನಲ್ಲಿ ಮಾತ್ರ ಸ್ವಾಧೀನ ಇದ್ದೇನೆಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ಒಡ್ಡನ್ನು ದಾಟಿ ವಾದಿಗಳ ಜಮೀನಿಗೆ ತೊಂದರೆ ನೀಡುತ್ತಿದ್ದೆನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ನಮಗೆ ತೊಂದರೆ ನೀಡುತ್ತಿದ್ದಾರೆಂದು ನುಡಿಯುತ್ತಾರೆ. ಅವರು ತೊಂದರೆ ನೀಡುವ ಬಗ್ಗೆ ಹನುಮಸಾಗರ ಠಾಣೆಗೆ ಕಂಪ್ಲೇಂಟ್ ಕೊಟ್ಟಿರುತ್ತೇನೆ. ಈ ಎಲ್ಲಾ ವಿಚಾರ 1 ನೇ ಪ್ರತಿವಾದಿಗೆ ಗೊತ್ತಿದ್ದು ಆತ ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತವೆಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಖರೀದಿ ಹಿಡಿದಾಗಿನಿಂದಲೂ ಸಹ ಮೂರು ಎಕರೆ 28 ಗುಂಟೆ ಜಮೀನಿಗೆ ವಾದಿಗಳು ಮಾಲೀಕರು ಮತ್ತು ಕಬ್ಜಾದಾರರು ಇದ್ದರೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಅದನ್ನು ದಾಟಿ ಬಂದು ಕಲ್ಲು ಕಿತ್ತು ಹಾಕಿ ನನಗೆ ತೊಂದರೆ ಕೊಡುತ್ತಿದ್ದಾರೆಂದು ಎಂದು ನುಡಿಯುತ್ತಾರೆ. ಅಲ್ಲಿ ನಾನು ಹೇಳಿದಂತಹ ಕಲ್ಲು ಇಲ್ಲ, ಕೇವಲ ಒಡ್ಡು ಇದ್ದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿಯು ಹದ್ದು ಬಸ್ತು ಮಾಡಿದಾಗ ಹಾಕಿದ್ದರು ಎಂದು ನುಡಿಯುತ್ತಾರೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲಲ. ಸಾಕ್ಷಿಯು ಮುಂದುವರೆದು ಅವರ 3 ಎರಕೆ 28 ಗುಂಟೆ ಜಮೀನನ್ನು ಅಳತೆ ಮಾಡಿಸಿ ಹದ್ದು ಬಸ್ತು ಮಾಡಿಸಿಕೊಂಡು ಉಳಿದ ಜಮೀನನ್ನು ನನಗೆ ಬಿಡಲಿ ನನಗೆ ಯಾವುದೇ ತಕರಾರು ಇಲ್ಲವೆಂದು ನುಡಿಯುತ್ತಾರೆ. ದಿನಾಂಕ 10-08-2016 ರಂದು ವಾದಿಗಳ ಜಮೀನಿಗೆ ಕಬ್ಜಾ ಹರಕತ್ತು ಮಾಡಿರುತ್ತೇವೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಶಿಕ್ಷಕನಿದ್ದು ಯಾರ ತಂಟೆಗೂ ಹೋಗುವುದಿಲ್ಲ ನಾನು ಒಬ್ಬನೇ ಇದ್ದು ಅವರು 4 -5 ಜನ ಅಣ್ಣತಮ್ಮದಿರು ಇದ್ದು ಅವರ

ಕುಟುಂಬದಲ್ಲಿ ಪೊಲೀಸರು 4 -5 ಜನ ಇದ್ದು ನಮಗೆ ತೊಂದರೆ ನೀಡಿರುತ್ತಾರೆಂದು ಕಣ್ಣೀರು ಹಾಕುತ್ತಾ ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**